# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ಜ್ಞಾನ ಸಂಗಮ" ಬೆಳಗಾವಿ – 590 018

**ರಾಷ್ಟ್ರೀಯ ಸೇವಾ ಯೋಜನೆ**

ಡಾ|| ಹೆಚ್.ಎನ್. ಜಗನ್ನಾಥ ರೆಡ್ಡಿ ಬಿ.ಇ., ಎಂ.ಇ., ಪಿಹೆಚ್.ಡಿ. — ದೂರವಾಣಿ ಸಂ : 0831–2405468

ಕುಲಸಚಿವರು — ಫ್ಯಾಕ್ಸ್ ಸಂ : 0831–2405467


ಸಂ. ವಿತಾವಿ/ಬಿ.ಜಿ.ಎಮ್/ರಾ.ಸೇ.ಯೋ/ಸಾವ್ಯಾನ/2018-19/6737 — ದಿನಾಂಕ: 26 OCT 2018

## :ಸುತ್ತೋಲೆ:

**ವಿಷಯ :** ಎನ್.ಎಸ್.ಎಸ್. ವಾರ್ಷಿಕ ವಿಶೇಷ ಶಿಬಿರ ಹಾಗೂ ಇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳ ರಕ್ಷಣೆಯ ಕುರಿತಾಗಿ ಸೂಕ್ತ ಕ್ರಮ ಕೈಗೊಳ್ಳುವ ಕುರಿತು.

**ಉಲ್ಲೇಖ:** ಯುಸೇಇ/ರಾ.ಸೇಯೋ/2018–19/270 ದಿನಾಂಕ: 17/10/2018

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ವಾರ್ಷಿಕ ಶಿಬಿರ ಮತ್ತು ಇತರ ಚಟುವಟಿಕೆಗಳಲ್ಲಿ ಎನ್.ಎಸ್.ಎಸ್. ಸ್ವಯಂ ಸೇವಕ / ಸ್ವಯಂ ಸೇವಕೀಯರ ರಕ್ಷಣೆಯ ಕುರಿತಾಗಿ ಪತ್ರದ ಮೂಲಕ ಹಾಗೂ ಸಂಯೋಜನಾಧಿಕಾರಿಗಳ ಸಭೆಗಳಲ್ಲಿ ಹಲವು ಸೂಚನೆಗಳನ್ನು ನೀಡಲಾಗಿತ್ತು. ಆದರೆ ಕಳೆದ 6 ವರ್ಷಗಳಲ್ಲಿ 9 ಸ್ವಯಂ ಸೇವಕರು ಮೃತಪಟ್ಟಿದ್ದಾರೆ. ಅಲ್ಲದೇ ದಿನಾಂಕ: 15.10.2018 ರಂದು ಕಾಲೇಜು ಒಂದರ ವಾರ್ಷಿಕ ಶಿಬಿರ ನಡೆಯುವ ಸಂದರ್ಭದಲ್ಲಿ ಕೆರೆಗೆ ಬಿದ್ದು, ಮೂವರು ವಿದ್ಯಾರ್ಥಿಗಳು ಮೃತ ಪಟ್ಟಿರುವುದು ದುರದೃಷ್ಟಕರವಾಗಿದೆ. ಮುಂದೆ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರ ಮತ್ತು ಇತರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಸಲಹೆಗಳನ್ನು ಪಾಲಿಸುವಂತೆ ಸೂಚಿಸಲಾಗಿದೆ.

೧. ಕೆರೆ–ಸರೋವರ, ಸಮುದ್ರ, ಅಣೆಕಟ್ಟುಗಳ ಪಕ್ಕದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರಗಳನ್ನು ನಡೆಸದಿರುವುದು ಹಾಗೂ ಈ ಸ್ಥಳಗಳಲ್ಲಿ ಟ್ರೆಕ್ಕಿಂಗ್ ಇತ್ಯಾದಿಗಳನ್ನು ಕೈಗೊಳ್ಳದಿರುವುದು.

೨. ವಿಶೇಷ ವಾರ್ಷಿಕ ಶಿಬಿರಗಳ ಸಂದರ್ಭದಲ್ಲಿ ವಾಹನ ಸೌಲಭ್ಯಗಳನ್ನು ಹೊಂದಿರುವುದು.

೩. ಕಾರ್ಯಕ್ರಮಗಳ ಕುರಿತಾಗಿ ಸ್ಥಳೀಯ ಪೋಲೀಸ್ ಠಾಣೆಗೆ ಲಿಖಿತ ಮಾಹಿತಿ ನೀಡುವುದು.

೪. ಆಸ್ಪತ್ರೆ, ಪೋಲೀಸ್ ಠಾಣೆ, ಅಗ್ನಿಶಾಮಕ ದಳ ಮತ್ತು ಸಂಘಟನೆಗೆ ಸಹಾಯ ಮಾಡುವ ವ್ಯಕ್ತಿಗಳ ದೂರವಾಣಿ ಸಂಖ್ಯೆಗಳನ್ನು ಬರೆದಿಟ್ಟುಕೊಳ್ಳುವುದು ಮತ್ತು ಪ್ರಕಟಿಸುವುದು.

೫. ಅಪಾಯಕಾರಿ ಪ್ರದೇಶಗಳಲ್ಲಿ ಛಾಯಾಚಿತ್ರಗಳನ್ನು ತೆಗೆದುಕೊಳ್ಳದಂತೆ ಕಟ್ಟುನಿಟ್ಟಾಗಿ ಸೂಚಿಸುವುದು.

೬. ಶಿಬಿರಗಳು ಮತ್ತು ಹೊರ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸ್ವಯಂ ಸೇವಕ / ಸೇವಕಿಯರ ಪಾಲಕರಿಗೆ ಮಾಹಿತಿ ನೀಡಿ ಲಿಖಿತ ಒಪ್ಪಿಗೆ ಪಡೆಯುವುದು.

೭. ಭಾವೈಕ್ಯತಾ ಶಿಬಿರ, ಯುವಜನೋತ್ಸವ, ಸಾಹಸ ಶಿಬಿರ, ಇತ್ಯಾದಿಗಳಲ್ಲಿ ಭಾಗವಹಿಸುವಾಗ ಇಂಡಮಿನೆಂಟ್ ಬಾಂಡ್‌ನ್ನು ಕಡ್ಡಾಯವಾಗಿ ಬರೆಸಿಕೊಳ್ಳುವುದು.

೮. ದೈಹಿಕ ಅನಾರೋಗ್ಯವಿರುವ ಸ್ವಯಂ ಸೇವಕ/ಸೇವಕಿಯರು ಕಡ್ಡಾಯವಾಗಿ ಶಿಬಿರಗಳಲ್ಲಿ ಭಾಗವಹಿಸದಂತೆ ಸೂಚಿಸುವುದು.

೯. ಶಿಬಿರಗಳಲ್ಲಿ ಕಡ್ಡಾಯವಾಗಿ ಮಹಿಳಾ ಅಧ್ಯಾಪಕರನ್ನು ನಿಯೋಜಿಸುವುದು.

೧೦. ಶಿಬಿರದ ಕಾರ್ಯಕ್ರಮಗಳು ನಡೆಯುವ ಸಂದರ್ಭದಲ್ಲಿ ಕಡ್ಡಾಯವಾಗಿ ಮೊಬೈಲ್‌ಗಳನ್ನು ನಿಷೇಧಿಸುವುದು.

೧೧. ಸ್ವಯಂ ಸೇವಕ/ಸೇವಕಿಯರಿಗೆ ಶಿಬಿರಕ್ಕೆ ಸಂಬಂಧಿಸಿದ ನಿಯಮಗಳನ್ನು ಸಭೆಕರೆದು ಸ್ಪಷ್ಟವಾಗಿ ವಿವರಿಸಿ ಲಿಖಿತವಾಗಿ ನೀಡಿ ಸಹಿ ಪಡೆಯುವುದು.

ಈ ಮೇಲಿನ ಸೂಚನೆಗಳನ್ನಲ್ಲದೆ ಸ್ಥಳೀಯ ಅಗತ್ಯ ತಕ್ಕಂತೆ ಸೂಚನೆಗಳನ್ನು ನೀಡುವುದು. ಹಾಗೂ ರಾ.ಸೇ.ಯೋ ಕಾರ್ಯಕ್ರಮಾಧಿಕಾರಿಗಳು ವಿದ್ಯಾರ್ಥಿಗಳ ರಕ್ಷಣೆಯ ಕುರಿತು ಸೂಕ್ತ ಕ್ರಮ ವಹಿಸುವಂತೆ ನಿರ್ದೇಶನ ನೀಡಲು ಕೋರಲಾಗಿದೆ.

24.10.18

ಕುಲಸಚಿವರು

**ಇವರಿಗೆ,**

ಪ್ರಾಂಶುಪಾಲರು ಮತ್ತು ಸಂಯೋಜನಾಧಿಕಾರಿಗಳು, ವಿ.ತಾ.ವಿ. ಅಧಿನಕ್ಕೊಳಪಡುವ ಸಂಬಂದಪಟ್ಟ ಎಲ್ಲಾ ಅಭಿಯಾಂತ್ರಿಕ/ತಾಂತ್ರಿಕ ಮಹಾವಿದ್ಯಾಲಯಗಳು.

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಕುಲಪತಿಗಳು, ವಿ.ತಾ.ವಿ., ಬೆಳಗಾವಿ ಇವರಿಗೆ ಕುಲಪತಿಗಳ ಕಾರ್ಯದರ್ಶಿಗಳ ಮುಖಾಂತರ.
2. ರಾಜ್ಯ ಎನ್.ಎಸ್.ಎಸ್. ಅಧಿಕಾರಿಗಳು ರಾ.ಸೇ.ಯೋ. ಕೋಶ, ಯುಸಕ್ರೀಇ, ಬೆಂಗಳೂರು.
3. ವಿಶೇಷಾಧಿಕಾರಿಗಳು, ಸಿ.ಎನ್.ಸಿ ವಿಭಾಗ, ವಿತಾವಿ., ಬೆಳಗಾವಿ, ಇವರಿಗೆ ಸದರಿ ಸುತ್ತೋಲೆಯನ್ನು ವಿ.ತಾ.ವಿ.ಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
4. ಕಛೇರಿ ಕಡತಕ್ಕೆ.